# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 21 |
| 2 | ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 16-09-2021 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದ ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಹಳೆಯ ಕಾರ್ಪೋರೇಷನ್ ಕಟ್ಟಡವನ್ನು ಕೆಡವಿ ನೂತನ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ | ಬಂದಿದ್ದಲ್ಲಿ ನೂತನ ಕಟ್ಟಡ ಕಾಮಗಾರಿಯ ಅಂದಾಜು ಮೌಲ್ಯವೆಷ್ಟು; ಗುತ್ತಿಗೆ ಹೊಣೆ ಹೊತ್ತಿರುವ ಕಂಪನಿ ಯಾವುದು; ನಿರ್ಧಿಷ್ಟಪಡಿಸಿರುವ ಕಾಮಮಿತಿಯೇನು; | ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದಲ್ಲಿರುವ ಹಳೆಯ ಕಾರ್ಪೋರೇಷನ್ ಕಟ್ಟಡವನ್ನು ಕೆಡವಿ ನೂತನವಾಗಿ ಅಂದಾಜು ಮೊತ್ತ ರೂ.1500.00 ಲಕ್ಷಗಳಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣ ಹಾಗೂ ಆಟದ ಮೈದಾನ ಅಭಿವೃದ್ಧಿ ಪಡಿಸಲು ಉದ್ದೇಶಿಸಿದ್ದು, ಪ್ಯಾಕೇಜ್-6ರ ಸದರಿ ಕಾಮಗಾರಿಗಾಗಿ ಗುತ್ತಿಗೆಯನ್ನು ಶ್ರೀ. ಭುವನೇಶ್ವರಿ ಕನ್ಸ್ಟ್ರಕ್ಷನ್, ಬಿಎಸ್‌ಕೆ 1ನೇ ಹಂತ 2ನೇ ಬ್ಲಾಕ್, ಬೆಂಗಳೂರುರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಮಿತಿ 12 ತಿಂಗಳುಗಳು ಆಗಿರುತ್ತದೆ.<br><br>ಮುಂದುವರೆದು, ಅಂದಾಜು ಮೊತ್ತ ರೂ.1500.00 ಲಕ್ಷಗಳಲ್ಲಿ ರೂ.300.00 ಲಕ್ಷಗಳಿಗೆ ಎಸ್‌ಎಸ್‌ಎಂ ಶಾಲೆ ಎದುರು ವಿವಿದೋದ್ಧೇಶ ಕಛೇರಿ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಪ್ಯಾಕೇಜ್-4ರ ಸದರಿ ಕಾಮಗಾರಿಗಾಗಿ ಗುತ್ತಿಗೆಯನ್ನು ಶ್ರೀ ಪೋಲವಾರ್ ಗೋಪಾಲ್ ಕೃಷ್ಣ, ನ್ಯೂ ಬಿಇಎಲ್ ರಸ್ತೆ, ಆರ್.ಎಂ.ವಿ. 2ನೇ ಹಂತ, ಬೆಂಗಳೂರು ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಮಿತಿ 12 ತಿಂಗಳುಗಳು ಆಗಿರುತ್ತದೆ. |

...2/-

| | | |
|---|---|---|
| ಇ | ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ (ವಿವರವನ್ನು ಒದಗಿಸುವುದು) | ಪ್ರಸ್ತುತ ಪ್ಯಾಕೇಜ್–6 ರಲ್ಲಿರುವ ವಿವಿದೋದ್ದೇಶ ಕಛೇರಿ ಕಟ್ಟಡಗಳ ಪಾಯದ ಕಾಮಗಾರಿಯು ಪೂರ್ಣಗೊಂಡಿದ್ದು, ಪ್ಲಿಂತ್ ಹಂತದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಪ್ಯಾಕೇಜ್ 4 ರಲ್ಲಿರುವ ಕ್ರೀಡಾ ಸಂಕೀರ್ಣ ಹಾಗೂ ಆಟದ ಮೈದಾನ ಅಭಿವೃದ್ಧಿ ಪಡಿಸುವ ಕಾಮಗಾರಿಯಲ್ಲಿ ತಳಪಾಯದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ನಅಇ 230 ಎಂಎನ್‌ವೈ 2021 (ಇ)**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ